ಸಿ.ಸಿ. ನಂ. : 2853/2024

ಸಿ.ಡಬ್ಲ್ಯೂ:1

ಪಿ.ಡಬ್ಲ್ಯೂ: 1

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ನ್ಯಾಯಾಲಯ, ಕಾರವಾರ**

ಸಿ.ಸಿ. ನಂ. : 2853/2024

| | | |
|---|---|---|
| ಸಾಕ್ಷಿದಾರರ ಹೆಸರು | : | ನಿಹಾಲ್ ಖಾನ್ |
| ತಂದೆಯ ಹೆಸರು | : | ನಾಸೀರ್ ಖಾನ್ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಪೋಲಿಸ್ ಉಪನಿರೀಕ್ಷಕರು , ಕಾರವಾರ ಗ್ರಾಮೀಣ ಠಾಣೆ |
| ವಾಸ್ತವ್ಯ | : | ಕಾರವಾರ |

ಸತ್ಯ ಪ್ರತಿಜ್ಞೆಯ ಮೇರೆಗೆಃ ದಿಃ **19-01-2026**

**ಮುಖ್ಯ ವಿಚಾರಣೆಃ ಹಿರಿಯ ಸ ಸ ಅ ರವರಿಂದಃ**

ನಾನು ದಿನಾಂಕ 03-02-2024 ರಿಂದ ಇಲ್ಲಿಯವರೆಗೆ ಪೋಲಿಸ್ ಉಪನಿರೀಕ್ಷಕರಾಗಿ ಕಾರವಾರ ಗ್ರಾಮೀಣ ಪೋಲಿಸ್ ಠಾಣೆಯಲ್ಲ ಕಶತವ್ಯ ನಿರ್ವಹಿಸುತ್ತಾ ಬಂದಿರುತ್ತೇನೆ.

2. ದಿನಾಂಕ 05-10-2024 ರಂದು ನಾನು ಹಾಗೂ ಚಾಸಾ-4 ರಿಂದ 8 ರವರೊಂದಿಗೆ ಶಿರವಾಡ-ಕಡವಾಡ ಪೆಟ್ರೋಲಿಂಗ್ ಕರ್ತವ್ಯದಲ್ಲಿರುವಾಗ 5-30 ಗಂಟೆಗೆ ಬಾತ್ಮಿದಾರರಿಂದ ಶಿರವಾಡ ಇಂಡಸ್ಟ್ರೀಯಲ್ ಏರಿಯಾ ಹತ್ತಿರ ಆರೋಪಿತನಾದ ದಯಾನಂದ ಪೆಡ್ನೇಕರ್ ಎಂಬ ವ್ಯಕ್ತಿಯು ಅಕ್ರಮವಾಗಿ ಗೋವಾ ಸಾರಾಯಿಯನ್ನು ತಂದು ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ . ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟನ್ನು ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಚಾಸಾ-13 ರವರಿಗೆ ಕರೆ ಮಾಡಿ ವರದಿಯನ್ನು ಸಲ್ಲಿಸಲು ತಿಳಿಸಿರುತ್ತೇನೆ. 6-15 ಗಂಟೆಗೆ ಚಾಸಾ-13 ರವರು ನನಗೆ ಕರೆ ಮಾಡಿ ಅನುಮತಿ ಪಡೆದ ಬಗ್ಗೆ ತಿಳಿಸಿರುತ್ತಾರೆ. ಅದರಂತೆ 6-30 ಗಂಟೆಗೆ ಚಾಸಾ-2 ಮತ್ತು 3 ರವರು ಶಿರವಾಡ ಗ್ರಾಮದವರಾಗಿದ್ದು ಅವರನ್ನು ಪಂಚರಾಗಿ ಬರಮಾಡಿಕೊಂಡು ಅವರಿಗೆ ದಾಳಿಯ ವಿಷಯವನ್ನು ತಿಳಿಸಿ ಅವರಿಗೆ ನೋಟಿಸು ನೀಡಿ ಅವರು ಪಂಚರಾಗಲು ಒಪ್ಪಿದ ನಂತರ 7-50 ಗಂಟೆಗೆ ನಾವು ಶಿರವಾಡ ಇಂಡಸ್ಟ್ರೀಯಲ್ ಏರಿಯಾ ಹತ್ತಿರ ಹೋಗಿ ಆರೋಪಿಯ ಮನೆಯ ಹತ್ತಿರ ಹೋಗಿ ಅಲ್ಲಿ ನೋಡಿದಾಗ ಒಬ್ಬ ವ್ಯಕ್ತಿಯು ಕುರ್ಚಿಯ ಮೇಲೆ ಕುಳಿತಿದ್ದು ಅವನು ನಮ್ಮನ್ನು ನೋಡಿ ಗಾಬರಿಗೊಂಡು, ಅವನಿಗೆ ತನ್ನ ಹೆಸರು ಮತ್ತು ವಿಳಾಸ ಕೇಳಲಾಗಿ ತಾನು

ಸಿ.ಸಿ. ನಂ. : 2853/2024

ಸಿ.ಡಬ್ಲ್ಯೂ:1

ಪಿ.ಡಬ್ಲ್ಯೂ: 1

ದಯಾನಂದ ನಾಗೇಶ ಪೆಡ್ನೇಕರ್, ವಾಸ ಶಿರವಾಡ ಅಂತಾ ಹೇಳಿದ್ದು ಅವರ ಬಳಿ ಗೋವಾ ಸಾರಾಯಿ ಇದೆಯಾ ಅಂತಾ ಕೇಳಿದಂತೆ ಅವರು ತಡವರಿಸಿದಾಗ ನಮ್ಮ ಸಿಬ್ಬಂದಿಯವರ ಜೊತೆಗೂಡಿ ಅವರ ಸಹಾಯದಿಂದ ಅಕ್ಕಪಕ್ಕದಲ್ಲಿ ಶೋಧನೆ ಮಾಡಿದಾಗ ಅವರು ಕುಳಿತಿದ್ದ ಜಾಗದ ಪಕ್ಕದಲ್ಲಿ ಒಂದು ತೆಂಗಿನ ಮರ ಇದ್ದು ಅದರ ಕೆಳಗೆ ಒಂದು ಕೈ ಚೀಲ ಸಿಕ್ಕಿದ್ದು ಅದು ಹಳದಿ-ಹಸಿರು ಬಣ್ಣದ್ದು ಆಗಿದ್ದು ಅದರಲ್ಲಿ ಗೋವಾ ಸಾರಾಯಿ ಬಾಟಲಿಗಳಿದ್ದು ಅದರ ಬಗ್ಗೆ ಆರೋಪಿಯ ಬಳಿ ವಿಚಾರಿಸಲಾಗಿ ಅದನ್ನು ತಾನು ಗೋವಾ ರಾಜ್ಯದ ಸಾರಾಯಿ ಇದ್ದು ತಾನು ಕಾರವಾರದಿಂದ ತೆಗೆದುಕೊಂಡು ಬಂದಿರುವ ಬಗ್ಗೆ ತಿಳಿಸಿರುತ್ತಾನೆ. ಇದನ್ನು ತಾನು ದುಪ್ಪಟ್ಟು ಬೆಲೆಗೆ ಮಾರುವ ಉದ್ದೇಶದಿಂದ ತೆಗೆದುಕೊಂಡು ಬಂದಿರುತ್ತೇನೆ ಅಂತಾ ತಿಳಿಸಿರುತ್ತಾನೆ. ಸದ್ರಿ ಕೈಚೀಲದಲ್ಲಿರುವ ಸಾರಾಯಿ ಬಾಟಲಿಗಳನ್ನು ತೆಗೆದು ಪಂಚರ ಸಮಕ್ಷಮ ಪರೀಲಿಸಿದಾಗ ಅದರಲ್ಲಿ Light Horse Whiskey for sale in Goa only 750 ಎಂ.ಎಲ್ ನ 6 ಬಾಟಲಿಗಳು , Light Horse Whiskey for sale in Goa only 180 ಎಂ.ಎಲ್ ನ 3 ಬಾಟಲಿಗಳು , Goa Special Palm Fenney 750 ಎಂ ಎಲ್ ನ 1 ಬಾಟಲಿ, ಹಾಗೂ Goa Special Palm Fenney 180 ಎಂ ಎಲ್ ನ 2 ಬಾಟಲಿಗಳು ಇದ್ದು ಅವುಗಳನ್ನು ಮಾರಾಟ ಮಾಡಲು ತಮ್ಮ ಬಳಿ ಪರವಾನಿಗೆ ಇದೆಯಾ ಎಂದು ಕೇಳಲಾಗಿ ಅದಕ್ಕೆ ಅವರು ಇಲ್ಲ ಅಂತಾ ಹೇಳಿರುತ್ತಾರೆ. ಸದ್ರಿ ಎಲ್ಲಾ ಸಾರಾಯಿ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲು ಬಿಳಿ ಬಟ್ಟೆಯಿಂದ ಸುತ್ತಿ ಅರಗಿನ ಮೊಹರು ಹಾಕಿ ಬಿಳಿ ಚೀಟಿಗಳನ್ನು ಪಂಚರ ಸಹಿ ಪಡೆದು ಅಂಟಿಸಿ ಆ ಸಮಯದಲ್ಲಿ ಚಾಸಾ-9 ರವರು ಪ್ರತ್ಯಕ್ಷದರ್ಶಿಯಾಗಿ ಹಾಜರಿದ್ದರು. ಆರೋಪಿಗೆ ವಯಸ್ಸಾಗಿದ್ದ ಕಾರಣ ಅವರಿಗೆ ಘಟನಾ ಸ್ಥಳದಲ್ಲಿಯೇ ನೋಟಿಸು ನೀಡಿ ಅವರು ದಿನಾಂಕ 06-10-2024 ರಂದು 10-00 ಗಂಟೆಗೆ ಪೋಲಿಸ್ ಠಾಣೆಗೆ ಹಾಜರಾಗಲು ತಿಳಿಸಿರುತ್ತೇನೆ.

3. ಪಂಚನಾಮೆಯನ್ನು 7-50 ಗಂಟೆಯಿಂದ 8-22 ನಿಮಿಷಗಳವರೆಗೆ ಜರುಗಿಸಲಾಯಿತು. ಛಾಯಾ ಚಿತ್ರವನ್ನು ತೆಗೆಸಿರುತ್ತೇನೆ. ನಂತರ ಮುದ್ದೆಮಾಲು, ಪಂಚನಾಮೆಯೊಂದಿಗೆ ಪೋಲಿಸ್ ಠಾಣೆಗೆ ಬಂದು ಸ್ವದೂರನ್ನು ಚಾಸಾ-13 ರವರಿಗೆ ನೀಡಿರುತ್ತೇನೆ.

4. ಸಾಕ್ಷಿ ದಿನಾಂಕ 05-10-2024 ರ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ಗುರುತಿಸಿಕೊಂಡ ಕಾರಣ ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತಾ ಗುರುತಿಸಲಾಯಿತು. ದೂರನ್ನು ತನ್ನ ಸಹಿಯನ್ನು ಗುರುತಿಸಿಕೊಂಡ ಕಾರಣ ಅದನ್ನು ನಿಪಿ-2

ಎಂದು ಸಾಕ್ಷಿಯ ಸಹಿಯನ್ನು ನಿಪಿ–2(ಎ) ಅಂತಾ ಗುರುತಿಸಲಾಯಿತು. ಸಾಕ್ಷಿ ಪಂಚರಿಗೆ ನೀಡಿರುವ ನೋಟಿಸನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ–3 ಎಂದು, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು , ಸಾಕ್ಷಿ ಆರೋಪಿಗೆ ನೀಡಿರುವ ನೋಟಿಸನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ–4, ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು , ಸಾಕ್ಷಿ ಛಾಯ ಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಎಂದು ಗುರುತಿಸಲಾಂತು .

Light Horse Whiskey for sale in Goa only 750 ಎಂ.ಎಲ್ ನ 6 ಬಾಟಲಿಗಳನ್ನು ಮುಮಾ–1, Light Horse Whiskey for sale in Goa only 180 ಎಂ.ಎಲ್ ನ 3 ಬಾಟಲಿಗಳನ್ನು ಮುಮಾ–2, Goa Special Palm Fenny 750 ಎಂ ಎಲ್ ನ 1 ಬಾಟಲಿಯನ್ನು ಮುಮಾ–3, ಹಾಗೂ Goa Special Palm Fenny 180 ಎಂ ಎಲ್ ನ 2 ಬಾಟಲಿಯನ್ನು ಮುಮಾ–4, ಹಾಗೂ ಒಂದು ಕೈ ಚೀಲವನ್ನು ಮುಮಾ–5 ಅಂತಾ ಗುರುತಿಸಲಾಯಿತು. ಸಾಕ್ಷಿ ಮುಮಾ–5 ರ ಕೈ ಚೀಲದಲ್ಲಿ ಅಂಟಿಸಿದ ಚೀಟಿಯಲ್ಲ ಕಾಣುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಜಿ ಪಿ ಟಿ ವಕೀಲರಿಂದಃ**

ಶಿರವಾಡ ಇಂಡಸ್ಟ್ರೀಯಲ್ ಏರಿಯಾ ನಮ್ಮ ಪೋಲಿಸ್ ಠಾಣೆಯಿಂದ ಸುಮಾರು 8 ಕಿ ಮೀ ದೂರದಲ್ಲಿದೆ ಎಂದರೆ ಸರಿ. ಸದ್ರಿ ಏರಿಯಾದಲ್ಲಿ ನಿಮ್ಮ ಠಾಣೆಯಿಂದ ಬೀಟ್ ಪೋಲಸರು ಕರ್ತವ್ಯದಲ್ಲಿ ಇದ್ದೆ ಇರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಇಂಡಸ್ಟ್ರೀಯಲ್ ಏರಿಯಾದಲ್ಲಿ ಸುಮಾರು 300 ರಿಂದ 400 ವಾಸದ ಮನೆಗಳು ಇವೆ ಎಂದರೆ ಸಾಕ್ಷಿ ಅಷ್ಟೊಂದು ಮನೆಗಳಿಲ್ಲ ಅಂತಾ ಉತ್ತರಿಸುತ್ತಾರೆ . ಸಾಕ್ಷಿ ಮುಂದುವರಿದು ಸುಮಾರು 100 ರಿಂದ 150 ಮನೆಗಳು ಇವೆ ಅಂತಾ ಉತ್ತರಿಸುತ್ತಾರೆ. ಸಾಮಾನ್ಯವಾಗಿ ಪೆಟ್ರೋಲಿಂಗ್ ಕರ್ತವ್ಯಕ್ಕೆ ಹೋದಾಗ ವಾರಸುದಾರರು ಇಲ್ಲದ ಅಬಕಾರ ಸ್ವತ್ತುಗಳು ಸಿಗುತ್ತವೆ ಎಂದರೆ ಸರಿಯಲ್ಲ. ನೀವು ಹೇಳುವ ದಿನಾಂಕದಂದು ಇಂಡಸ್ಟ್ರೀಯಲ್ ಏರಿಯಾಗೆ ಹೋಗಿದ್ದಾಗಲೀ ಆರೋಪಿಯ ಶೋಧನೆ ನಡೆಸಿದ್ದಾಗಲೀ ನಿಮಗೆ ಅವರ ವಶದಲ್ಲಿದ್ದ ಮುದ್ದೆಮಾಲುಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಠಾಣೆಯಲ್ಲಿ ವಾಹನ ಚಾಲನ ಪುಸ್ತಕ ಹಾಗೂ ದಿನಚರಿಯನ್ನು ನಿರ್ವಹಿಸಲಾಗುತ್ತದೆ ಎಂದರೆ ಸರಿ. ಅವುಗಳ ಪ್ರತಿಗಳನ್ನು ತನಿಖಾಧಿಕಾರಿಗೆ ನೀಡಿದ್ದೀರಾ ಎಂದರೆ

ಸಾಕ್ಷಿ ದಿನಚರಿಯ ಪ್ರತಿಯನ್ನು ನೀಡಿದ್ದೇನೆ ಅಂತಾ ಉತ್ತರಿಸುತ್ತಾರೆ. ಆರೋಪಿಯ ಕಡೆಯಿಂದ ಯಾವುದೇ ಮುದ್ದೆಮಾಲುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಾಗಲೀ ಪಂಚರಿಗಾಗಲೀ ಯಾವುದೇ ನೋಟಿಸು ನೀಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಪಂಚನಾಮೆ ಜರುಗಿಸಿದ್ದಾಗಲೀ, ಛಾಯ ಚಿತ್ರ ತೆಗೆಸಿದ್ದಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕೆ ಸಂಖ್ಯೆಗೋಸ್ಕರು ವಾರಸುದಾರರು ಇಲ್ಲದ ಯಾವುದೋ ಅಬಕಾರಿ ಸ್ವತ್ತನ್ನು ಬಳಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಕಾರವಾರ**